ಪಿ.ಡಬ್ಲ್ಯೂಃ 03.

ದಿನಾಂಕಃ 11-04-2019 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಸಿ ಬಿ ವಕೀಲರಿಂದಃ

ಸರ್ವೆ ನಂಃ **131** ನ್ನು ನಾನು ನೋಡಿರುವುದಿಲ್ಲ ಮತ್ತು ನನಗೆ ಗೊತ್ತಿಲ್ಲ. ನಾನು ಓದಿಲ್ಲವಾದ ಕಾರಣ ಹುಣಸೂರು ತಾಲ್ಲೋಕು, ಹನಗೋಡು ಹೋಬಳಿ , ಹೆಗ್ಗಂದೂರು ಗ್ರಾಮದ ಸರ್ವೆ ನಂಃ **131** ರ ಇತಿಹಾಸ ನನಗೆ ಗೊತ್ತಿಲ್ಲ. ಸರ್ವೆ ನಂಃ **131** ಯಾವ ಚಕ್ಕುಬಂಧಿಯೊಳಗೆ ಬರುತ್ತದೆಂದೂ ಕೂಡಾ ನನಗೆ ಗೊತ್ತಿಲ್ಲ. ಸರ್ವೆ ನಂಃ **131** ಮೂಲತಃ ಯಾರ ಹೆಸರಿನಲ್ಲಿತ್ತು ಮತ್ತು ಅವರಿಗೆ ಹೇಗೆ ಬಂತು ಎಂಬುದೂ ಸಹಾನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಮೂಲತಃ ಸರ್ವೆ ನಂಃ **131** ಹೊಸೂರ್ ತಮ್ಮೇಗೌಡರವರಿಗೆ ಸೇರಿದ್ದು ಎಂದಿದ್ದಾರೆ. ದಾವಾಸ್ವತ್ತು ಹೊಸುರ್ ತಮ್ಮೇಗೌಡರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ತಮ್ಮೇಗೌಡರು ದಾವಾಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದಿದ್ದಾರೆ. ನನ್ನ ಜಮೀನಿನ ಸರ್ವೆ ನಂಃ **16** ಆಗಿದೆ. ನಿಮಗೆ ಇನ್ನೂ ಸಾಗುವಳಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಇನ್ನೂ ದುರಸ್ತು ಆಗಿಲ್ಲ ಎಂದಿದ್ದಾರೆ.

ನಿಮ್ಮ ಜಮೀನಿನ ಚಕ್ಕುಬಂಧಿ ಏನು ಎಂದರೆ ಸಾಕ್ಷಿಯು ಸರ್ಕಾರದವರು ನನಗೆ ಕೊಟ್ಟಿಲ್ಲ ಎಂದಿದ್ದಾರೆ. ಹೊಸೂರ್ ತಮ್ಮೇಗೌಡರವರಿಗೆ ಐದು ಜನ ಮಕ್ಕಳು ಎಂದರೆ ಸರಿ. ಹೊಸೂರ್ ತಮ್ಮೇಗೌಡರು ಮೂಲತಃ ಹುಣಸೂರು ತಾಲ್ಲೋಕು, ಕಸಬಾ ಹೋಬಳಿ, ಮರದೂರು ಹೊಸೂರು ಗ್ರಾಮದ ವಾಸಿ ಎಂದರೆ ಸರಿ. ಹೊಸೂರ್ ತಮ್ಮೇಗೌಡರ ತಂದೆಯ ಹೆಸರು ಪಾಪೇಗೌಡ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಃ **131** ರ ಆರ್ ಟಿ ಸಿ ಯಾರ ಹೆಸರಿನಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾರು ಜಮೀನನ್ನು ಉಳುಮೆ ಮಾಡುತ್ತಾರೋ ಅವರ ಹೆಸರಿನಲ್ಲಿ ಆರ್ ಟಿ ಸಿ ದಾಖಲಾಗುತ್ತದೆ ಎಂದರೆ ಸರಿ. ದಾವಾಸ್ವತ್ತಿನ ಆರ್ ಟಿ ಸಿ ಹಾಲಿ ಯಾರ ಹೆಸರಿನಲ್ಲಿದೆ ಎಂದು ನಾನು ನೋಡಿರುವುದಿಲ್ಲ.

ಪಿ.ಡಬ್ಲ್ಯೂ: 03.

2 ನೇ ಪ್ರತಿವಾದಿ ಮಂಜುಳಾ ಎಂಬುವವರು ನಮ್ಮೂರಿನವರಾದ ಗೋವಿಂದೇಗೌಡರ ಹೆಂಡತಿ ಎಂದರೆ ಸರಿ. 1 ನೇ ಪ್ರತಿವಾದಿ ಸಣ್ಣೇಗೌಡರ ಮಗ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿ ನಮ್ಮೂರಾದಂತಹ ಹೆಗ್ಗಂದೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 1 ನೇ ವಾದಿ ಹೆಗ್ಗಂದೂರಿನಲ್ಲಿ ವಾಸವಾಗಿದ್ದಾರೆ. 1 ರಿಂದ 3 ನೇ ವಾದಿಗಳು ನಮ್ಮೂರಿನಲ್ಲೇ ವಾಸವಾಗಿದ್ದಾರೆ. ವಾದಿಗಳು ಹೆಗ್ಗಂದೂರಿನಲ್ಲಿ ವಾಸವಿರುವುದಿಲ್ಲ, ಅವರು ಮರದೂರು ಹೊಸೂರಿನಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಊರಿನಲ್ಲಿಯೇ ವಾಸವಾಗಿದ್ದಾರೆ ಎಂದಿದ್ದಾರೆ. ಸಾಕ್ಷಿ ಪುನಃ ನುಡಿಯುತ್ತಾ ಅವರು ಅಲ್ಲಿಯೂ ಹೋಗುತ್ತಾರೆ ಮತ್ತು ಇಲ್ಲಿಯೂ ಇದ್ದಾರೆ ಎಂದಿದ್ದಾರೆ. ವಾದಿಗಳು ಹೆಗ್ಗಂದೂರಿನಲ್ಲಿ ಯಾವ ಕಾಲಕ್ಕೂ ವಾಸವಾಗಿಲ್ಲ, ಅವರು ಮರದೂರಿನ ಹೊಸೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

ದಾವಾಸ್ವತ್ತನ್ನು ಹೊಸುರ್ ತಮ್ಮೇಗೌಡರು ದಿಃ**19-09-1980** ರಲ್ಲಿ ಸಣ್ಣೇಗೌಡರ ಮಗ ಶಿವೇಗೌಡರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಶಿವೇಗೌಡರು ದಿಃ **26-11-2007** ರಲ್ಲಿ ದಾವಾಸ್ವತ್ತನ್ನು ಮಂಜುಳಾರವರಿಗೆ ಮಾರಾಟ ಮಾಡಿದ್ದಾರೆ ಎಂದರೆನನಗೆ ಗೊತ್ತಿಲ್ಲ. ಶಿವೇಗೌಡರು ದಾವಾಸ್ವತ್ತನ್ನು ತಾವು ಕ್ರಯಕ್ಕೆ ಪಡೆದ ದಿನದಿಂದ ಅವರು ಮಾರಾಟ ಮಾಡುವವರೆಗೆ ಅವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಗೋವಿಂದೇಗೌಡರ ಹೆಂಡತಿ ಮಂಜುಳಾರವರು ಕ್ರಯಕ್ಕೆ ಪಡೆದ ದಿನದಿಂದ ಇಲ್ಲಿಯವರೆಗೆ ದಾವಾಸ್ವತ್ತನ್ನು ಉಳುಮೆ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಯಾವತ್ತೂ ಕೂಡಾ ವಾದಿಗಳು ದಾವಾಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಹೂಡುವ ಮುಂಚಿನಿಂದಲೂ ಹಾಗೂ ನಂತರದಲ್ಲಿಯೂ ಇಲ್ಲಿಯವರೆವಿಗೂ ಮಂಜುಳಾರವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ದಾವಾಸ್ವತ್ತಿನ ಅಕ್ಕಪಕ್ಕದಲ್ಲಿ ನಮಗೆ ಯಾವುದೇ ಜಮೀನೂ ಇಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಅರ್ಧ ಮೈಲಿ ದೂರದಲ್ಲಿದೆ ಇದೆ ಎಂದಿದ್ದಾರೆ. ನನ್ನ ಜಮೀನಿನ ಚಕ್ಕುಬಂಧಿಯೂ

ಪಿ.ಡಬ್ಲ್ಯೂ: 03.

ನನಗೆ ಗೊತ್ತಿಲ್ಲ, ಅವರ ದಾವಾ ಜಮೀನಿನ ಚಕ್ಕುಬಂಧಿಯೂ ನನಗೆ ಗೊತ್ತಿಲ್ಲ, ಆದರೂ ಕೂಡಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.